**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ: 05.08.2024</u>**

**<u>ಮುಂದುವರಿದ ಪಾಟೀ ಸವಾಲು : ಶ್ರೀ ಎಂ ಆರ್ ಆರೋಪಿ ಪರ ವಕೀಲರಿಂದ :</u>**

8. 21 ನಿವೇಶನಗಳನ್ನು ವಾಪಸ್ಸು ನೀಡುವಂತೆ ಆರೋಪಿಗೆ ನೋಟಿಸ್ ನೀಡಿದ್ದ ಬಗ್ಗೆ ಈ ಹಿಂದಿನ ಸಾಕ್ಷ್ಯ ದಲ್ಲಿ ಹೇಳಿರುವುದಿಲ್ಲ. ಸಾಕ್ಷಿಯು ದಿ:31.01.2016 ರ ಕರಾರು ಪತ್ರವನ್ನು ಕಲಂ.91 ರ ಅಡಿಯಲ್ಲಿ ಸಲ್ಲಿಸಿದ್ದ ಅರ್ಜಿಗೆ ಪೂರಕವಾಗಿ ಸಲ್ಲಿಸಿದ್ದು ಅದನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ನಿಪಿ-6 ರಂತೆ ನನಗೆ 1.25 ಕೋಟಿ ಸೇರಿದೆ ಎಂದರೆ ಸರಿ. ನಿಪಿ-6 ರಂತೆ 20 ನಿವೇಶನಗಳನ್ನು ಆರೋಪಿಗೆ ಯಾವುದೇ ಪ್ರತಿಫಲ ಅಪೇಕ್ಷೆ ಇಲ್ಲದೇ ವಾಪಸ್ಸು ನೀಡಿ 1 ಕೋಟಿ ಹಣ ಪಡೆದುಕೊಳ್ಳ ಬೇಕಾಗಿತ್ತು ಎಂದರೆ ಸರಿ. ನಿಪಿ-6 ರಲ್ಲಿ ನನ್ನ ಮತ್ತು ಆರೋಪಿಯ ಸಹಿ ಮತ್ತು ಹೆಬ್ಬೆಟ್ಟಿನ ಗುರುತುಗಳು ಇದೆ ಎಂದರೆ ಸರಿ. ಕರಾರು ಪತ್ರದಲ್ಲಿ ಹೇಳಿರುವಂತೆ ಚಿಂತಾಮಣಿ ನ್ಯಾಯಾಲಯದಲ್ಲಿರುವ ಯಾವುದೇ ದಾವೆಗಳನ್ನು ವಾಪಸ್ಸು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ.

9. ಆರೋಪಿಯು ನನಗೆ ಕಾನೂನು ಬದ್ಧವಾಗಿ ಯಾವುದೇ ಹಣ ಪಾವತಿ ಮಾಡಬೇಕಾಗಿಲ್ಲ ಎಂದರೆ ಸರಿಯಲ್ಲ. ಆ ರೀತಿಯ ಹಣವನ್ನು ವಸೂಲಿ ಮಾಡಿಕೊಳ್ಳುವ ಹಕ್ಕು ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ಕರಾರು ಪತ್ರದಂತೆ 20 ನಿವೇಶನಗಳ ಒಟ್ಟು ಮೌಲ್ಯ 2 ಕೋಟಿ 50 ಲಕ್ಷ ಇದೆ ಎಂದರೆ ಸರಿಯಲ್ಲ. ಆರೋಪಿಗೆ ನಿವೇಶನಗಳನ್ನು ವಾಪಸ್ಸು ನೀಡಬೇಕಾಗುತ್ತದೆ ಎಂದು ಅಕ್ರಮವಾಗಿ ಮತ್ತು ಕಾನೂನು ಬಾಹಿರವಾಗಿ ಈ ಪಿರ್ಯಾದು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕು ಎಂದು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಪಿರ್ಯಾದಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ: ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವನಹಳ್ಳಿ**

ಸಿ.ಸಿ.760/2017 **ಪಿಡಬ್ಲ್ಯೂ- 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕಃ 29.06.2024**

**ಪಾಟೀ ಸವಾಲು ಃ ಶ್ರೀ ಎಂ ಆರ್ ಆರೋಪಿ ಪರ ವಕೀಲರಿಂದ ಃ**

1. ಆರೋಪಿಯು ನನಗೆ 6 ವರ್ಷಗಳಿಂದ ಹೋಗುತ್ತಾ ಬರುತ್ತಾ ಪರಿಚಯ ಆಗಿರುತ್ತಾರೆ. ಆ ರೀತಿ ಪರಿಚಯ ಆಗಿರುವುದನ್ನು ಹೊರತು ಪಡಿಸಿ ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ಇರ ಲಿಲ್ಲ ಎಂದರೆ ಸರಿ. ನನ್ನ ದೂರಿನಲ್ಲಿ ತಿಳಿಸಿರುವ ವಿಳಾಸವನ್ನು ಹೊರತು ಪಡಿಸಿ ನಾನು ಬೇರೆ ಎಲ್ಲಿಯೂ ವಾಸವಾಗಿರಲಿಲ್ಲ ಎಂದರೆ

ಸರಿ. ಸಾಕ್ಷಿ ಮುಂದುವರಿದು ಬದಲಾವಣೆ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಸೈಟುಗಳನ್ನು ಖರೀದಿ ಮಾಡುವುದು ಮಾರಾಟ ಮಾಡುತ್ತಿದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಆ ರೀತಿಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯು ತನ್ನ ಜಮೀನನ್ನು ಅರ್ಧಂಬರ್ಧ ಅಭಿವೃದ್ಧಿ ಮಾಡಿದ್ದರು.

2. ಸಾಮಾನ್ಯವಾಗಿ ಯಾವುದೇ ಒಂದು ಲೇಔಟ್ ನ್ನು ಮಾಡಬೇಕಾದರೆ ಅದು ಅಭಿವೃದ್ಧಿ ಹೊಂದಿದ ನಂತರ ಮಾತ್ರ ಸಂಬಂದಪಟ್ಟ ನೀಡುತ್ತಾರೆ ಎಂದರೆ ಸರಿ. 2015 ರಲ್ಲಿ ಆರೋಪಿಯ ಜಮೀನು ಸಂಪೂರ್ಣವಾಗಿ ಅಭಿವೃದ್ಧಿ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅರ್ಧಂಬರ್ಧ ಅಭಿವೃದ್ಧಿ ಆಗಿತ್ತು ಎಂದು ನುಡಿಯುತ್ತಾರೆ. ಆ ರೀತಿ ಒಂದು ನಿವೇಶನವನ್ನು ಮಾರಾಟ ಮಾಡಲು ನನಗೆ ಪ್ರತಿ ಚದುರ ಅಡಿಗೆ 375/- ರೂ ನಂತೆ ಮಾತುಕತೆ ಆಗಿತ್ತು ಎಂದರೆ ಸರಿ. ಆ ರೀತಿ ಆರೋಪಿಯ ಜಮೀನು 2015 ರಲ್ಲಿ ಅಭಿವೃದ್ಧಿ ಆಗಿದ್ದ ಕಾರಣ ನಾನು ಮತ್ತು ನನ್ನ ಸ್ನೇಹಿತರು ಸೇರಿ ಒಟ್ಟು 21 ನಿವೇಶನಗಳನ್ನು ಖರೀದಿ ಮಾಡಿದ್ದೆ ಎಂದರೆ ಸಾಕ್ಷಿ 12 ನಿವೇಶನಗಳನ್ನು ಖರೀದಿ ಮಾಡಿದ್ದೆ ಎಂದು ನುಡಿಯುತ್ತಾರೆ. ನನ್ನ ಸಹೋದ್ಯೋಗಿ ಶ್ರೀನಿವಾಸ್ ರವರು ಸಹ 6-7 ನಿವೇಶನಗಳನ್ನು ಖರೀದಿ ಮಾಡಿದ್ದು ಅದಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ.

3. ಆ ರೀತಿ ಪ್ರತಿ ನಿವೇಶನಕ್ಕೆ ಮೌಲ್ಯ ಒಟ್ಟು 4,25,000/- ಆಗಿರುತ್ತದೆ. ಆ ರೀತಿ ಒಟ್ಟು 21 ನಿವೇಶನಗಳ ಮೌಲ್ಯ ಸುಮಾರು 1 ಕೋಟಿಗೂ ಅಧಿಕ ಹಣ ನನಗೆ ಸೇರಿದೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ನಡುವೆ ಆಗಿದ್ದ ಎಂ ಒ ಯು ನಂತೆ ನಾನು ಹೇಳಿದ ವ್ಯಕ್ತಿಗೆ ಆರೋಪಿ ಬಂದು ನಿವೇಶನವನ್ನು ನೊಂದಣಿ ಮಾಡಿಕೊಡುವುದು ಉಳಿದ ಆಸ್ತಿ ಆರೋಪಿಯ ಹೆಸರಿನಲ್ಲಿ ಇಟ್ಟು ಕೊಳ್ಳುವುದು ಎಂಬ ಷರತ್ತು ಆಗಿದೆ ಎಂದರೆ ಸರಿ. ಸದರಿ ಎಂ ಒ ಯು ನಂತೆ ನನಗೆ ಬರಬೇಕಾದ ಹಣಕ್ಕೆ 21 ನಿವೇಶನಗಳನ್ನು ನಾನು ಮಾರಾಟ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಎಂ ಒ ಯು ನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಎಂ ಒ ಯು ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಅದನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ಆರೋಪಿಯು ಒಟ್ಟು 550 ನಿವೇಶನಗಳನ್ನು ಮಾಡಿದ್ದು ನನ್ನ ಜೊತೆ ಎಂ ಒ ಯು ಆಗುವ ಮೊದಲು ಆರೋಪಿ ಹಲವಾರು ನಿವೇಶನಗಳನ್ನು ಮಾರಾಟ ಮಾಡಿದ್ದರು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ 2 ನೇ ಖಂಡಿಕೆಯಲ್ಲಿ ತಿಳಿಸಿದಂತೆ ಕರಾರು ಪತ್ರವನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಈ ಪ್ರಕರಣ ದಾಖಲು ಮಾಡುವ ಮೊದಲು ಚಿಂತಾಮಣಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ.200/2015 ರಂತೆ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಆ ರೀತಿ ದಾವೆ ದಾಖಲಿಸಿದ ನಂತರ ನಾನು ಮತ್ತು ನನ್ನ ಸಹೋದ್ಯೋಗಿ ಸೇರಿ ಪೂನಮ್ ಪವಸ್ರ್ ಪ್ರೈ.ಲಿ ರವರಿಗೆ ಕರಾರು ಪತ್ರ ಮಾಡಿದ್ದೆವು ಎಂದರೆ ಸರಿ. ಸಾಕ್ಷಿ ಮುಂದುವರಿದು ಅದರ ಹಣವನ್ನು ಆರೋಪಿ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿವೇಶನ ಆರೋಪಿಯ ಹೆಸರಿನಲ್ಲಿ ಇದ್ದ ಕಾರಣ ಚೆಕ್ ನ್ನು ಆರೋಪಿಯ ಹೆಸರಿಗೆ ಕೊಡಿಸಿ ಅದರಿಂದ ನಾವೆಲ್ಲ ಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

5. ನಾನು ಮತ್ತು ಚಂದ್ರಬಾಬು ಪೂನಮ್ ಪವಸ್ರ್ ಪ್ರೈ.ಲಿ ರವರಿಗೆ ಮಾಡಿದ ಕರಾರಿನಲ್ಲಿ ಆರೋಪಿಯೊಂದಿಗೆ ಪಕ್ಷಗಾರರು ಎಂದರೆ ಸರಿ. ನಂತರ ಪೂನಮ್ ಪವಸ್ರ್ ಪ್ರೈ.ಲಿ ರವರು ಅಸಲು ದಾವಾ ಸಂಖ್ಯೆ.195/2016 ಚಿಂತಾಮಣಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನನಗೆ ಹಲವಾರು ಬಾರಿ ನೋಟಿಸ್ ಹಾಗೂ ಪೇಪರ್ ಪ್ರಕಟಣೆ ಆಗಿದ್ದರೂ ನಾನು ನ್ಯಾಯಾಲಯಕ್ಕೆ ಹಾಜರು ಆಗಿರುವುದಿಲ್ಲ ಎಂದರೆ ಸಾಕ್ಷಿ ಆ ರೀತಿ ನನಗೆ ಯಾವುದು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು, ಚಂದ್ರಬಾಬು ಮತ್ತು ಪೂನಮ್ ಪವಸ್ರ್ ಪ್ರೈ.ಲಿ ರವರು ಸೇರಿ ಆರೋಪಿಗೆ ತೊಂದರೆ ಕೊಡಬೇಕು ಎಂದು ಅಸಲು ದಾವಾ ಸಂಖ್ಯೆ.195/2016 ನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

6. ಯಲಹಂಕ ಪೋಲಿಸ್ ಠಾಣೆಯಲ್ಲಿ ನನ್ನ ಮತ್ತು ಆರೋಪಿ ನಡುವೆ ಸಂದಾನವಾಗಿದ್ದು ಅದರಂತೆ ಅವರು ನನಗೆ 2,25,00,000/- ಹಣವನ್ನು ಕೊಡಲು ಒಪ್ಪಿರುತ್ತಾರೆ. ಸದರಿ ಸಂದಾನದ ಪ್ರತಿಯನ್ನು ನ್ಯಾಯಾಲಯದ ಆದೇಶ ಮಾಡಿದ್ದರು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಸಂದಾನದ ಮೂಲ ಪ್ರತಿ ನನ್ನ ಬಳಿ ಇರುವುದಿಲ್ಲ ಎಂದರೆ ಸರಿ. ಸದರಿ ಸಂದಾನದ ಮೂಲ ಪ್ರತಿ ನನ್ನ ಕೈ ಬರಹದಲ್ಲಿ ಇದೆ ಎಂದರೆ ಸರಿ. ಸದರಿ ಸಂದಾನದ ಪತ್ರದಲ್ಲಿ ನಾನು ಕರಾರು ಮಾಡಿರುವ 21

ನಿವೇಶನಗಳನ್ನು ಆರೋಪಿಗೆ ವಾಪಸ್ಸು ನೀಡಿದರೆ ಆರೋಪಿ ನನಗೆ 1,00,00,000/- ಹಣ ವಾಪಸ್ಸು ಕೊಡುವುದಾಗಿ ಷರತ್ತು ಇತ್ತು ಎಂದರೆ ಸರಿಯಲ್ಲ. ಸದರಿ ಮೂಲ ಸಂದಾನದ ಪ್ರತಿ ಆರೋಪಿಯ ಬಳಿ ಇರುತ್ತದೆ.

7. ಸದರಿ ಸಂದಾನದ ಪತ್ರದಂತೆ 21 ನಿವೇಶನಗಳನ್ನು ಆರೋಪಿಗೆ ವಾಪಸ್ಸು ನೀಡಿ ನನಗೆ ಹಣ ಕೊಡುವಂತೆ ನೋಟಿಸ್ ನೀಡಿರುತ್ತೇನೆ. ನನ್ನ ದೂರಿನಲ್ಲಿ ತಿಳಿಸಿದಂತೆ ಪೋಲಿಸರಿಗೆ ದೂರು ನೀಡಿದ್ದು ಅದರಂತೆ ರಾಜಿ ಸಂದಾನ ಆಯಿತು ಎಂಬ ವಿಚಾರಕ್ಕೆ ಸಂಬಂದಿಸಿದಂತೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಅದನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವನಹಳ್ಳಿ**